# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 617(576)
ಮಾನ್ಯ ಸದಸ್ಯರ ಹೆಸರು: ಡಾ: ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ: 22.07.2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಿ.ಪಿ.ಟಿ. (6-8) ಹುದ್ದೆಗಳಲ್ಲಿ ನೇರ ನೇಮಕಾತಿಯಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ಜಿಪಿಟಿ (6-8) ಹುದ್ದೆಗಳಲ್ಲಿ ನೇರ ನೇಮಕಾತಿಗೊಂಡು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ **ಸಂಖ್ಯೆ:20110** ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿರಿಸಿದೆ. |
| ಆ) | ಜಿ.ಪಿ.ಟಿ. (6-8) ಹುದ್ದೆಯಲ್ಲಿ ಮುಂಬಡ್ತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ಜಿಪಿಟಿ (6-8) ಹುದ್ದೆಯಲ್ಲಿ ಮುಂಬಡ್ತಿ ಪಡೆದು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಶೂನ್ಯ. |
| ಇ) | ವೃಂದ ಮತ್ತು ನೇಮಕಾತಿ ನಿಯಮಗಳು ತಿದ್ದುಪಡಿ ಕಡತ ಸಂಖ್ಯೆ: ಇಪಿ 171 ಪಿಬಿಎಸ್ 2022ನ್ನು ಸಚಿವ ಸಂಪುಟದಲ್ಲಿ ಅನುಮೋದನೆ ಪಡೆಯಲು ವಿಳಂಬ ಮಾಡುತ್ತಿರುವುದೇಕೆ; ಹಾಗೂ ಅನುಮೋದನೆ ಮಾಡಿ ಯಾವಾಗ ಸೇವಾ ನಿರತ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರಿಗೆ ನ್ಯಾಯ ಒದಗಿಸುತ್ತೀರಿ; ಇದಕ್ಕೆ ಕಾಲಮಿತಿ ನಿಗಧಿಪಡಿಸಬಹುದೇ; | 6 ರಿಂದ 8ನೇ ತರಗತಿಯ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಡಿಸುವ ಸಂಬಂಧದ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಈ) | ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಹಿರಿಯ ಮುಖ್ಯ ಉಪಾಧ್ಯಾಯರು ಮತ್ತು ಪ್ರೌಢ ಶಾಲಾ ಸಹ ಶಿಕ್ಷಕ ಗ್ರೇಡ್-2 ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಕೈಗೊಂಡ ಕ್ರಮಗಳೇನು; | **ಸರ್ಕಾರಿ ಪ್ರಾಥಮಿಕ ಸಂಬಂಧಿಸಿದಂತೆ:-** ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಹಾಗೂ ಹಿರಿಯ ಮುಖ್ಯ ಶಿಕ್ಷಕರು ಹುದ್ದೆ ಬಡ್ತಿಗೆ ಜಿಪಿಟಿ ವೃಂದವನ್ನು ಪೋಷಕ ವೃಂದವನ್ನಾಗಿ ಪರಿಗಣಿಸುವಂತೆ ಕೋರಿ ಶ್ರೀ ದೊರೆಸ್ವಾಮಿ ಮತ್ತು ಇತರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಕೆಎಟಿ ಅರ್ಜಿ ಸಂ:1134-1143/2022ರ ಪ್ರಕರಣದಲ್ಲಿ ದಿನಾಂಕ: 23.01.2023 ರಂದು ನೀಡಿರುವ ಆದೇಶದಂತೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು (ಜಿಪಿಟಿ) ಬಡ್ತಿಗೆ ಪೋಷಕ ವೃಂದವಾಗಿ ಪರಿಗಣಿಸುವ ವಿಷಯವು ಪರಿಶೀಲನೆಯಲ್ಲಿರುತ್ತದೆ.<br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ:-** ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:3443-3503/2020 ಮತ್ತು 857- 917/2021ಗಳ |

| | | |
|---|---|---|
| | | ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಪಿಟಿಷನ್ ಸಂಖ್ಯೆ: 16936/2021 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಪ್ರಕರಣದಲ್ಲಿ ದಿನಾಂಕ: 11.07.2024 ರಂದು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು, ಸದರಿ ವಿಚಾರಣೆಯಲ್ಲಿ ಮಾನ್ಯ ನ್ಯಾಯಾಧೀಶರು ಎರಡು ವಾರದೊಳಗಾಗಿ 2016ರ ವೃಂದ ಮತ್ತು ನೇಮಕಾತಿ ನಿಯಮದ ಕರಡನ್ನು ಪ್ರಕಟಿಸಿ, ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ತಿಳಿಸಿರುವ ಮೇರೆಗೆ ಅದರಂತೆ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಧಿಸೂಚನೆ ಹೊರಡಿಸುವ ಸಂಬಂಧ ಪರಿಶೀಲನೆಯಲ್ಲಿದೆ. |
| ಉ) | ವೃಂದ ಮತ್ತು ನೇಮಕಾತಿ ನಿಯಮಗಳು ತಿದ್ದುಪಡಿಗಾಗಿ ಆಗ್ರಹಿಸಿ ಈಗಾಗಲೇ 2018 ಮತ್ತು 2020 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರ ಸಂಘ (ರಿ), ರಾಜ್ಯ ಘಟಕವು ಎರಡು ಭಾರಿ ಫ್ರೀಡಂ ಪಾರ್ಕ್ ಚಳುವಳಿ ಮಾಡಿರುವುದು ಹಾಗೂ ಮತ್ತೆ ಶಿಕ್ಷಕರು ಫ್ರೀಡಂ ಪಾರ್ಕ್ ಚಳುವಳಿಗೆ ಸಿದ್ಧರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಾಗಿ ಆಗ್ರಹಿಸಿ ಈಗಾಗಲೇ 2018 ಮತ್ತು 2020ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರರ ಶಿಕ್ಷಕರ ಸಂಘ(ರಿ) ಇವರ ಮನವಿಗಳು ಸ್ವೀಕೃತವಾಗಿರುತ್ತವೆ. |
| ಊ) | ಶಿಕ್ಷಕರ ನ್ಯಾಯಯುತ ಮುಂಬಡ್ತಿಗಳನ್ನು ನೀಡಲು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಂಡಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಹಾಗೂ ಹಿರಿಯ ಮುಖ್ಯ ಶಿಕ್ಷಕರು ಹುದ್ದೆ ಬಡ್ತಿಗೆ ಜಿಪಿಟಿ ವೃಂದವನ್ನು ಪೋಷಕ ವೃಂದವನ್ನಾಗಿ ಪರಿಗಣಿಸುವಂತೆ ಕೋರಿ ಶ್ರೀ ದೊರೆಸ್ವಾಮಿ ಮತ್ತು ಇತರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಕೆಎಟಿ ಅರ್ಜಿ ಸಂ:1134-1143/2022ರ ಪ್ರಕರಣದಲ್ಲಿ ದಿನಾಂಕ: 23.01.2023 ರಂದು ನೀಡಿರುವ ಆದೇಶದಂತೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು (ಜಿಪಿಟಿ) ಬಡ್ತಿಗೆ ಪೋಷಕ ವೃಂದವಾಗಿ ಪರಿಗಣಿಸುವ ವಿಷಯವು ಪರಿಶೀಲನೆಯಲ್ಲಿರುತ್ತದೆ. |

**ಇಪಿ 55 ಪಿಎಂಎ 2024**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರು ಜಿ.ಪಿಟಿ (6-8) ಹುದ್ದೆಗಳಲ್ಲಿ ನೇರ ನೇಮಕಾತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಜಿಲ್ಲಾವಾರು ವಿವರ

| Row Labels | TOTAL GPT TEACHERS |
|---|---|
| BAGALKOT(2902) | 919 |
| BALLARI(2912) | 761 |
| BELAGAVI CHIKKODI(2930) | 1550 |
| BELAGAVI(2901) | 846 |
| BENGALURU RURAL(2921) | 192 |
| BENGALURU U NORTH(2928) | 117 |
| BENGALURU U SOUTH(2920) | 205 |
| BIDAR(2905) | 773 |
| CHAMARAJANAGARA(2927) | 331 |
| CHIKKABALLAPURA(2929) | 409 |
| CHIKKAMANGALURU(2917) | 151 |
| CHITRADURGA(2913) | 544 |
| DAKSHINA KANNADA(2924) | 679 |
| DAVANAGERE(2914) | 268 |
| DHARWAD(2909) | 525 |
| GADAG(2908) | 359 |
| HASSAN(2923) | 292 |
| HAVERI(2911) | 644 |
| KALBURGI(2904) | 1392 |
| KODAGU(2925) | 125 |
| KOLAR(2919) | 313 |
| KOPPAL(2907) | 928 |
| MANDYA(2922) | 585 |
| MYSURU(2926) | 779 |
| RAICHUR(2906) | 1223 |
| RAMANAGARA(2932) | 224 |
| SHIVAMOGGA(2915) | 590 |
| TUMAKURU MADHUGIRI(2931) | 277 |
| TUMAKURU(2918) | 381 |
| UDUPI(2916) | 321 |
| UTTARA KANNADA SIRSI(2934) | 493 |
| UTTARA KANNADA(2910) | 147 |
| VIJAYANAGARA(2935) | 722 |
| VIJAYAPURA(2903) | 1190 |
| YADAGIRI(2933) | 855 |
| **Grand Total** | **20110** |